**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 124 ಫಿ್ರಾ.ಸಾ. : 50**

| | |
|---|---|
| ಸಾಕ್ಷಿಯ ಹೆಸರು | : ಹನುಮಂತ ನಾಯ್ಕ ಮಾಡಿ, |
| ತಂದೆಯ ಹೆಸರು | : ಕನ್ನಾ ನಾಯ್ಕ ಮಾಡಿ, |
| ವಯಸ್ಸು | : 45 ವರ್ಷ |
| ಉದ್ಯೋಗ | : ಕಟ್ಟಡ ನಿರ್ಮಾಣ ಕೆಲಸ, |
| ವಾಸ | : ಕಾನಗೋಡು, ಸಿದ್ದಾಪುರ. |

**ದಿನಾಂಕಃ 16-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಾನಗೋಡು ಗ್ರಾಮದಲ್ಲಿ ಹುಟ್ಟಿದಾಗಿನಿಂದ ವಾಸ ಇದ್ದೇನೆ. ನನಗೆ ಅಲ್ಲಿ ಸ್ವಂತ ಮನೆ ಇದೆ. ನನ್ನ ಮನೆಗೆ ಶೌಚಾಲಯ ಇದೆ. ಆದರೆ ಅದನ್ನು ಆರೋಪಿ ಮೂಲಕ ಕೊಟ್ಟಿಲ್ಲ. ನಂತರ ಪಂಚಾಯತಿಯಿಂದ ಕೊಟ್ಟಿದ್ದಾರೆ. ಆರೋಪಿ ಕಾನಗೋಡು ಗ್ರಾಮ ಪಂಚಾಯತಿ ಅಧ್ಯಕ್ಷ ಆಗಿದ್ದ. ಆರೋಪಿ ನಮ್ಮ ಊರಿನವನು. ಆರೋಪಿ ಪರಿಚಯ ಇದೆ. ಕಾನಗೋಡು ಗ್ರಾಮದಲ್ಲಿ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಶೌಚಾಲಯ ನಿರ್ಮಾಣಕ್ಕೆ ಸರಕಾರದಿಂದ ರೂ. 20 ಲಕ್ಷ ಮಂಜೂರು ಆಗಿತ್ತು, ಅದು ನನಗೆ ಮಾಹಿತಿ ಇದೆ. ಅದರಲ್ಲಿ ನಾನು ಫಲಾನುಭವಿ ಆಗಿದ್ದೆ ಎಂದು ನನಗೆ ಮೊದಲು ಗೊತ್ತಿರಲಿಲ್ಲ, ಈ ಪ್ರಕರಣದಲ್ಲಿ ಕೇಸಿಗೆ ಬಂದ ನಂತರ ನನಗೆ ನನ್ನ ಹೆಸರು ಫಲಾನುಭವಿ ಪಟ್ಟಿಯಲ್ಲಿ ಇತ್ತು ಎಂದು ಗೊತ್ತಾಯಿತು. ನನಗೆ ಪಂಚಾಯತಿಯಿಂದ ನಿರ್ಮಿಸಿಕೊಳ್ಳಲು ರೂ. 3,000/- ಸಹಾಯ ಧನ ನೀಡಿಲ್ಲ ಮತ್ತು ಶೌಚಾಲಯವನ್ನು ನಿರ್ಮಿಸಿ ಕೊಟ್ಟಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ಸ್ ರವರಿಂದ**

2. ನಾನು 2001-2002 ನೇ ಸಾಲಿನ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿಯೇ ನನ್ನ ಮನೆಗೆ ಶೌಚಾಲಯ ಪಡೆದಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಪಡೆದುಕೊಂಡಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ